ಸ್ಪೀಕರ್ ತೀರ್ಪು ಪ್ರಶ್ನಿಸಿದ್ದ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ನಕಾರ

# ಅನರ್ಹ ಶಾಸಕರು ಅತಂತ್ರ

14/8/19

**ವಿಕ ಸುದ್ದಿಲೋಕ** ಬೆಂಗಳೂರು/ಹೊಸದಿಲ್ಲಿ

ಅನರ್ಹ ಶಾಸಕರ ಅರ್ಜಿಯ ತುರ್ತು ವಿಚಾರಣೆ ಕೋರಿಕೆಯನ್ನು ಸುಪ್ರೀಂಕೋರ್ಟ್ ಮಂಗಳವಾರ ಸ್ಪಷ್ಟವಾಗಿ ತಳ್ಳಿಹಾಕಿದ್ದು, ಬಿಜೆಪಿ ಪಾಲಿನ ಈ 'ಹುತಾತ್ಮ'ರು ಇನ್ನೂ ಕೆಲ ತಿಂಗಳ ಕಾಲ ಅತಂತ್ರರಾಗಿಯೇ ಉಳಿಯಲಿದ್ದಾರೆ!





ಜೆಡಿಎಸ್-ಕಾಂಗ್ರೆಸ್ ಮೈತ್ರಿಕೂಟದ ಈ 17 ಅನರ್ಹ ಶಾಸಕರನ್ನು ಹೊರಗಿಟ್ಟು ಪೂರ್ಣ ಪ್ರಮಾಣದ ಸಚಿವ ಸಂಪುಟ ರಚನೆ ಮಾಡಲು ಬಿಜೆಪಿಗೆ 'ವಚನ ಬದ್ಧತೆ' ಅಡ್ಡಿಯಾಗುತ್ತಿದೆ. ಹೀಗಾಗಿ, ಸುಪ್ರೀಂಕೋರ್ಟ್‌ನಲ್ಲಿ ಅನರ್ಹ ಶಾಸಕರ ಪ್ರಕರಣ ಇತ್ಯರ್ಥವಾಗುವವರೆಗೆ ರಾಜ್ಯಕ್ಕೆ 'ಅರ್ಧ ಸರಕಾರ'ವಷ್ಟೇ ಖಾತರಿಯಾಗಿದೆ.

ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರಕಾರ ಪದಚ್ಯುತಗೊಳಿಸಿ ನೂತನ ಬಿಜೆಪಿ ಸರಕಾರವನ್ನು ಅಧಿಕಾರಕ್ಕೆ ತರುವಲ್ಲಿ ಮೈತ್ರಿಕೂಟದ ಈ 17 ಅನರ್ಹ ಶಾಸಕರು ನಿರ್ಣಾಯಕ ಪಾತ್ರ ವಹಿಸಿದ್ದರು. ವಿಧಾನ ಸಭಾ ಸದಸ್ಯತ್ವದಿಂದ ಇವರನ್ನು ಅನರ್ಹಗೊಳಿಸಿರುವ ಸ್ಪೀಕರ್ ಆದೇಶಕ್ಕೆ ಕೋರ್ಟ್‌ನಲ್ಲಿ ತಡೆ ನಿರೀಕ್ಷಿಸಿ ಸಚಿವ ಸಂಪುಟ ರಚನೆ ಪ್ರಕ್ರಿಯೆ ವಿಳಂಬ ಮಾಡಲಾಗಿತ್ತು. ಬಿ.ಎಸ್.ಯಡಿಯೂರಪ್ಪ ಅವರು ನೂತನ ಸಿಎಂ ಆಗಿ ಪದಗ್ರಹಣ ಮಾಡಿ ಮೂರು ವಾರಗಳು ಕಳೆದರೂ ಏಕವ್ಯಕ್ತಿ ಸಂಪುಟವಿದೆ.

ಮುಖ್ಯ ನ್ಯಾಯಮೂರ್ತಿ ರಂಜನ್ ಗೋಗೊಯ್ ನೇತೃತ್ವದ ತ್ರಿಸದಸ್ಯ ಪೀಠದಲ್ಲಿ ಅಯೋಧ್ಯೆ ವಿಚಾರಣೆ ನಿರಂತರ ನಡೆಯುತ್ತಿರುವ ಕಾರಣ ಅನರ್ಹ ಶಾಸಕರ ಪರ ವಕೀಲ ಮುಕುಲ್ ರೋಹಟಗಿ ಅವರು ನ್ಯಾ.ಅರುಣ್ ಮಿಶ್ರಾ ಅವರಿದ್ದ ಪೀಠಕ್ಕೆ ಮನವಿ ಮಾಡಿದರು. ಮನವಿ ಆಲಿಸಿದ ಪೀಠವು, ಅರ್ಜಿ ಕುರಿತಾದ ವಿವರಣೆಯನ್ನು ರಿಜಿಸ್ಟ್ರಾರ್‌ಗೆ ಸಲ್ಲಿಸಲು ಸೂಚಿಸಿತು. ವಕೀಲ ರೋಹಟಗಿ ವಿವರಣೆ ಸಲ್ಲಿಸಿದ ಬಳಿಕವಷ್ಟೇ ರಿಜಿಸ್ಟ್ರಾರ್ ಅವರು ವಿಚಾರಣೆಯ ದಿನಾಂಕ ನಿಗದಿ ಮಾಡಲಿದ್ದಾರೆ.

**ಇನ್ನೂ ನೆಲೆ ಇಲ್ಲ**

ಜು.26ರಂದು ನೂತನ ಬಿಜೆಪಿ ಸರಕಾರದ ಸಿಎಂ ಆಗಿ ಯಡಿಯೂರಪ್ಪ ಅಧಿಕಾರ ಸ್ವೀಕರಿಸಿದರು. ಮೈತ್ರಿಕೂಟದ ಬಂಡಾಯ ಶಾಸಕರ ಅನರ್ಹತೆಗೆ ಕೋರ್ಟ್‌ನಲ್ಲಿ ತಡೆಯಾಜ್ಞೆ ನಿರೀಕ್ಷಿಸಿ ಸಂಪುಟ ರಚನೆ ವಿಳಂಬ ಮಾಡಲಾಗಿತ್ತು. ಸ್ಪೀಕರ್ ಕ್ರಮ ಪ್ರಶ್ನಿಸಿದ್ದ ಅರ್ಜಿಯನ್ನು ತುರ್ತು ವಿಚಾರಣೆ ನಡೆಸಬೇಕೆಂಬ ಅನರ್ಹ ಶಾಸಕರ ಕೋರಿಕೆಯನ್ನು ಸುಪ್ರೀಂಕೋರ್ಟ್ ಮಂಗಳವಾರ ತಳ್ಳಿ ಹಾಕಿದೆ. ಅರ್ಜಿ ವಿಚಾರಣೆಗೆ ದಿನಾಂಕ ನಿಗದಿಯಾಗಬೇಕಿದ್ದು, ಸಂಬಂಧಪಟ್ಟವರಿಗೆ ನೋಟೀಸ್ ಜಾರಿ ಪ್ರಕ್ರಿಯೆ ಮುಗಿಸಿ ವಾದ-ವಿವಾದ ಆಲಿಸಿ ಕೋರ್ಟ್ ತೀರ್ಪು ನೀಡಲು ಕೆಲತಿಂಗಳಾಗಲಿವೆ. ಅಲ್ಲಿಯವರೆಗೆ ಈ ಅನರ್ಹ ಶಾಸಕರು ಸಚಿವ ಸಂಪುಟ ಸೇರುವಂತಿಲ್ಲ, ಸದ್ಯ ಶಾಸಕರಲ್ಲದ ಕಾರಣ ಮತಕ್ಷೇತ್ರದ ಕೆಲಸ ಕಾರ್ಯಗಳಲ್ಲೂ ತೊಡಗುವಂತಿಲ್ಲ. ಹೀಗಾಗಿ, ಮೈತ್ರಿ ಸರಕಾರದ ವಿರುದ್ಧ ಬಂಡಾಯವೆದ್ದು ಅನರ್ಹರಾಗಿರುವವರು ದಿನಕಳೆದಂತೆ ಇನ್ನಷ್ಟು ನೇಪಥ್ಯಕ್ಕೆ ಸರಿಯುವ ಆತಂಕದಲ್ಲಿದ್ದಾರೆ.

ವಿಧಾನಸಭಾಧ್ಯಕ್ಷರು 2 ಕಂತುಗಳಲ್ಲಿ ತೀರ್ಪು ಪ್ರಕಟಿಸಿ ಜೆಡಿಎಸ್‌ನ 3 ಹಾಗೂ ಕಾಂಗ್ರೆಸ್‌ನ 14 ಶಾಸಕರನ್ನು ವಿಧಾನಸಭಾ ಸದಸ್ಯತ್ವದಿಂದ ಅನರ್ಹಗೊಳಿಸಿದ್ದರು. ಸ್ಪೀಕರ್ ಆದೇಶಕ್ಕೆ ಸುಪ್ರೀಂಕೋರ್ಟ್‌ನಲ್ಲಿ ತಡೆಯಾಜ್ಞೆ ಸಿಗಲಿದ್ದು, ಹೊಸ ಬಿಜೆಪಿ ಸರಕಾರದ ಸಂಪುಟ ಸೇರುವ ಲೆಕ್ಕಾಚಾರ ಅನರ್ಹ ಶಾಸಕರದ್ದಾಗಿತ್ತು. ಈ ಲೆಕ್ಕಾಚಾರ ತಲೆಕೆಳಗಾಗಿದೆ.

## ಅರ್ಧ ಸರಕಾರ!

ಮೈತ್ರಿ ಸರಕಾರ ಪದಚ್ಯುತಗೊಳಿಸಿ ಬಿಜೆಪಿ ಸರಕಾರ ಪ್ರತಿಷ್ಠಾಪಿಸುವ ತಂತ್ರಗಾರಿಕೆಗೆ ದಾಳವಾದ ಈ ಅನರ್ಹ ಶಾಸಕರನ್ನು ಹೊರಗಿಟ್ಟು ಪೂರ್ಣ ಪ್ರಮಾಣದ ಸಚಿವ ಸಂಪುಟವನ್ನು ರಚಿಸಲು ಸಾಧ್ಯವಾಗದ ಸ್ಥಿತಿ ಬಿಜೆಪಿ ನಾಯಕತ್ವದ್ದಾಗಿದೆ. ತಮಗಾಗಿ 'ಹುತಾತ್ಮ'ರಾದವರಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಿ, ಭರವಸೆಯಂತೆ ನಡೆದುಕೊಳ್ಳಬೇಕಿದೆ. ಹೀಗಾಗಿ, ಅನರ್ಹರನ್ನು ತಕ್ಷಣಕ್ಕೆ ಹೊರಗಿಟ್ಟು ಸಂಪುಟ ರಚನೆ ಮಾಡಿದರೂ, ಅವರ ಕೋಟಾವನ್ನು ಖಾಲಿ ಉಳಿಸಿಕೊಳ್ಳಲೇಬೇಕಿದೆ. ಹೀಗಾಗಿ, ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥವಾಗುವವರೆಗೆ ರಾಜ್ಯದಲ್ಲಿ 'ಅರ್ಧ ಸಂಪುಟ'ದ ಅಧಿಕಾರ ಅನಿವಾರ್ಯ ಎಂದು ಹೇಳಲಾಗಿದೆ.

## 19ಕ್ಕೆ ಸಂಪುಟ ವಿಸ್ತರಣೆ?

ರಾಜ್ಯ ಸಚಿವ ಸಂಪುಟ ವಿಸ್ತರಣೆ ಪ್ರಕ್ರಿಯೆ ಮುಂದಿನ ವಾರಕ್ಕೆ ಮುಂದೂಡಿಕೆಯಾಗಿದ್ದು, ಇದೇ 19ರಂದು ಹೊಸ ಸಂಪುಟ ಅಸ್ತಿತ್ವಕ್ಕೆ ಬರುವ ಸಾಧ್ಯತೆ ಇದೆ. ಸಿಎಂ ಯಡಿಯೂರಪ್ಪ ಅವರು ಇದೇ 16 ರಂದು ದಿಲ್ಲಿಗೆ ತೆರಳಲಿದ್ದಾರೆ. ಅಲ್ಲಿ ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ನಡೆಸಲಿದ್ದು, ಆ. 19ರಂದು ಸಂಪುಟ ವಿಸ್ತರಣೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

## ರಾಜೀನಾಮೆ ಅರ್ಜಿ ಇತ್ಯರ್ಥ

**ಬೆಂಗಳೂರು:** ಅತೃಪ್ತ ಶಾಸಕರು ಸಲ್ಲಿಸಿದ್ದ ರಾಜೀನಾಮೆಯನ್ನು ಅಂಗೀಕರಿಸುವಂತೆ ಸ್ಪೀಕರ್‌ಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ. ನಟರಾಜ ಶರ್ಮ ಸಲ್ಲಿಸಿದ್ದ ಅರ್ಜಿ ಸಿಜೆ ಎ.ಎಸ್. ಓಕ್ ಮತ್ತು ನ್ಯಾ.ಪಿ.ಎಂ. ನವಾಜ್ ಅವರಿದ್ದ ವಿಭಾಗೀಯ ಪೀಠದ ಮುಂದೆ ಬಂದಿತು. ಆಗ ಸರಕಾರಿ ವಕೀಲರು, ಅರ್ಜಿದಾರರು ಮಾಡಿರುವ ಮನವಿ ಈಗ ಅನೂರ್ಜಿತವಾಗಿದೆ, ಏಕೆಂದರೆ ಸ್ಪೀಕರ್ ಈಗಾಗಲೇ ಆ ಬಗ್ಗೆ ತೀರ್ಪು ನೀಡಿದ್ದಾರೆ ಎಂದರು. ಹಾಗಾಗಿ ಕೋರ್ಟ್, ಅರ್ಜಿ ಇನ್ನು ಸ್ವೀಕಾರಾರ್ಹವಲ್ಲ ಎಂದು ಹೇಳಿ ಇತ್ಯರ್ಥಗೊಳಿಸಿತು.

4